**ದಿನಾಂಕ: 07.08.2021 ರಂದು ಸಮಯ 10.30 ಗಂಟೆಗೆ ವಾರ್ಡ್ 154–ಬಸವನಗುಡಿ ವಾರ್ಡಿಗೆ ಸಂಬಂಧಿಸಿದಂತೆ ವಿವಿದ್ಡೋದ್ದೇಶ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

## ಹಾಜರಿದ್ದವರು

1. ಶ್ರೀ. ಮಂಜುನಾಥ ರೆಡ್ಡಿ, ವಾರ್ಡ್ ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರು ವಾರ್ಡ್ 154
2. ಶ್ರೀ. ಗಿರೀಶ , ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ 154 ಹಾಗೂ ಸದಸ್ಯ ಕಾರ್ಯದರ್ಶಿ
3. ಶ್ರೀ. ಹೇಮಂತ್ ಕುಮಾರ್. ಕೆ.ಹೆಚ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ 154
4. ಶ್ರೀ. ಬಾಲಕೃಷ್ಣ. ಎನ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–154.
5. ಶ್ರೀ. ರಮೇಶ್ ಅರಿಸಿಕೆರಿ, Water Inspector, ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾರ್ಡ್–154
6. ಶ್ರೀ.ಸದಾನಂದ, ಪೋಲೀಸ್ ಬಸವನಗುಡಿ ಸಂಚಾರಿ ಠಾಣೆ
7. ಶ್ರೀ. ಮುನಿರಾಜು ಕೆ., ಕಿರಿಯ ಅಭಿಯಂತರರು, BESCOM ವಾರ್ಡ್ 154
8. ಶ್ರೀ. ಎನ್. ನಾರಾಯಣ, ಕಂದಾಯ ಪರಿವೀಕ್ಷಕರು, ವಾರ್ಡ್ 154
9. ಶ್ರೀ. ಗೋಪಾಲಕೃಷ್ಣ, ಕಂದಾಯ ವಸೂಲಿಗಾರರು ವಾರ್ಡ್ 154

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಅಧ್ಯಕ್ಷರಾದ ಶ್ರೀ ಮಂಜುನಾಥ ರೆಡ್ಡಿ ರವರು ಪ್ರತಿ ತಿಂಗಳ ಮೊದಲನೇ/ಮೂರನೇ ಶನಿವಾರ ನಡೆಸಬೇಕೆಂದು ತಿಳಿಸುತ್ತ ಸಭೆಯಲ್ಲಿ ಉಪಸ್ಥಿತರಿರುವ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ಬಿಡಬ್ಲ್ಯೂಎಸ್ಎಸ್ಬಿ, ವಾರ್ಡ್–154 ರ ಸಹಾಯಕ ಅಭಿಯಂತರರು ಮಾತನಾಡಿ ಈ ಹಿಂದೆ ಸಭೆಯಲ್ಲಿ ಸೂಚಿಸಿರುವಂತೆ ಜಲಮಂಡಳಿ ವತಿಯಿಂದ ಒಳಚರಂಡಿ ಪೈಪ್‌ಗಳನ್ನು ಅಳವಡಿಸಲು ಬಸವನಗುಡಿ ವ್ಯಾಪ್ತಿಯಲ್ಲಿ ಅಗೆದಿರುವ ರಸ್ತೆಯ ಭಾಗಕ್ಕೆ ವೆಟ್‌ಮಿಕ್ಸ್ ಹಾಕಿ ಡಾಂಬರೀಕರಣ ಕಾಮಗಾರಿಯನ್ನು ಮಾಡಲು ಈ ಮೂಲಕ ತಿಳಿಸಲಾಗಿದೆ.

**ಕ್ರಮ: – ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಎಂ.ಎನ್.ಕೆ ಪಾರ್ಕ್ ಉಪವಿಭಾಗ, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಕ್ರಮಕೈಗೊಳ್ಳಲು ಕೋರಲಾಗಿರುತ್ತದೆ.**

ಬಸವನಗುಡಿಯ ಸಬ್‌ಇನ್ಸ್‌ಫೆಕ್ಟರ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಸರಗಳ್ಳತನ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಸಾರ್ವಜನಿಕರ ಹಿತದೃಷ್ಠಿಯಿಂದ ಸಿ.ಸಿ ಟಿ.ವಿ ಗಳನ್ನು ಘಟಿಜಗಳನ್ನು ವೀಕ್ಷಿಸಲು ವ್ಯವಸ್ತೆಮಾಡಿಕೊಡಲು ಕೋರಿರುತ್ತಾರೆ. ಸದರಿ ವಿಷಯವಾಗಿ ಈಗಾಗಲೇ ಸಿ.ಸಿ ಟಿ.ವಿ ಅಳವಡಿಸುವ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು ಯೋಜನೆ (ದಕ್ಷಿಣ) ರವರಿಂದ ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಯನ್ನು ಶೀಘ್ರವಾಗಿ ಪ್ರಾರಂಭಿಸುವಂತೆ ಕೋರಲಾಗಿದೆ.

**ಕ್ರಮ: ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ರವರಿಗೆ ಶೀಘ್ರವಾಗಿ ಕ್ರಮ ವಹಿಸಲು ಕೋರಲಾಗಿರುತ್ತದೆ.**

>>>>2

ಬಸವನಗುಡಿ ವಾರ್ಡ ವ್ಯಾಪ್ತಿಯಲ್ಲಿ ಬರುವ ಮುಖ್ಯ ರಸ್ತೆಗಳಲ್ಲಿ ಪಾದಚಾರಿ ಮಾರ್ಗಗಳಲ್ಲಿ ಹಾಗೂ ಜನಸಂದಣಿ ಪ್ರದೇಶಗಳಲ್ಲಿ ತುಂಬ ದಿನಗಳಿಂದ ವಾಹನಗಳನ್ನು ನಿಲ್ಲಿಸಿದ್ದಲ್ಲಿ ಸಂಬಂಧಪಟ್ಟ ಇಲಾಖೆಯವರು ಸಂಚಾರಿ ಪೋಲೀಸ್ ಠಾಣೆಗೆ ಸೂಚಿಸಿ ತೆರವುಗೊಳಿಸಲು ಕ್ರಮವಹಿಸಲು ತಿಳಿಸಿದರು.

**ಕ್ರಮ: - ಕಾಮಗಾರಿ ಇಲಾಖೆ ಹಾಗೂ ಸಂಬಂಧಪಟ್ಟ ಇಲಾಖೆ ಮತ್ತು ಪೋಲೀಸ್ ಇನ್ಸ್‌ಪೆಕ್ಟರ್, ಬಸವನಗುಡಿ ಸಂಚಾರಿ ಪೋಲೀಸ್ ಠಾಣೆ ರವರ ರವರಿಗೆ ಕ್ರಮಕೈಗೊಳ್ಳಲು ಕೋರಲಾಗಿರುತ್ತದೆ.**

ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಬ್ಲಾಕ್ ಸ್ಪಾಟ್‌ನಲ್ಲಿ ಕಸ ಹಾಕದಂತೆ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಡೆಬ್ರಿಸ್‌ಗಳನ್ನು ತೆಗೆಯಲು ಕ್ರಮವಹಿಸಲು ಸೂಚಿಸಿದರು.

**ಕ್ರಮ: - ಸಹಾಯಕ ಅಭಿಯಂತರರು ವಾರ್ಡ್-154, ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-154 ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.**

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

07/8

AE 154

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ 154-ಬಸವನಗುಡಿ

<u>ಪ್ರತಿಯನ್ನು:</u>

1) ಮಾನ್ಯ ಆಯುಕ್ತರು ರವರ ಆಪ್ತ ಶಾಖೆಗೆ ಅವಗಾಹನೆಗೆ ತರಲು ಕಳುಹಿಸಿದೆ.
2) ವಲಯ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
3) ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
4) ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ,
5) ಕಾರ್ಯಪಾಲಕ ಅಭಿಯಂತರರು (ಬಸವನಗುಡಿ) /ಸ.ಕಾ.ನಿ.ಅ (ಬ.ಗು) ಉಪವಿಭಾಗ ರವರ ಅವಗಾಹನೆಗೆ.
6) ಆರೋಗ್ಯ ವೈದ್ಯಾಧಿಕಾರಿಗಳು, ಬಸವನಗುಡಿ ವಿಭಾಗ ರವರ ಅವಗಾಹನೆಗೆ.
7) ಪೋಲೀಸ್ ಇನ್ಸ್‌ಪೆಕ್ಟರ್, ಬಸವನಗುಡಿ ಕಾನೂನು ಸುವ್ಯವಸ್ಥೆ ಪೋಲೀಸ್ ಠಾಣೆ ರವರ ಅವಗಾಹನೆಗೆ.
8) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ, ಎಂ.ಎನ್.ಕೆ ಪಾರ್ಕ್, ಬಸವನಗುಡಿ ರವರ ಅವಗಾಹನೆಗೆ.
9) ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
10) ಕಛೇರಿ ಕಡತಕ್ಕೆ.